## ಪ್ರಾರ್ಥನೆ

# ಮಹಾನಿರ್ವಾಣತಂತ್ರದ ಬ್ರಹ್ಮಸ್ತೋತ್ರದಿಂದ

ಓಂ ನಮಸ್ತೇ ಸತೇ ಸರ್ವಲೋಕಾಶ್ರಯಾಯ
ನಮಸ್ತೇ ಚಿತೇ ವಿಶ್ವರೂಪಾತ್ಮಕಾಯ ।
ನಮೋಽದ್ವೈತತತ್ತ್ವಾಯ ಮುಕ್ತಿಪ್ರದಾಯ
ನಮೋ ಬ್ರಹ್ಮಣೇ ವ್ಯಾಪಿನೇ ನಿರ್ಗುಣಾಯ ॥

ಓಂ ಸರ್ವಲೋಕಗಳಿಗೆ ಆಶ್ರಯವಾದ ಸದ್ವಸ್ತುವಿಗೆ ನಮಸ್ಕಾರ; ವಿಶ್ವರೂಪಾತ್ಮಕವಾದ ಚಿದ್ವಸ್ತುವಿಗೆ ನಮಸ್ಕಾರ; ಮುಕ್ತಿ ನೀಡುವ ಅದ್ವೈತ ತತ್ತ್ವಕ್ಕೆ ನಮಸ್ಕಾರ; ಸರ್ವವ್ಯಾಪಿಯಾದ ನಿರ್ಗುಣ ಬ್ರಹ್ಮಕ್ಕೆ ನಮಸ್ಕಾರ.

ತ್ವಮೇಕಂ ಶರಣ್ಯಂ ತ್ವಮೇಕಂ ವರೇಣ್ಯಂ
ತ್ವಮೇಕಂ ಜಗತ್ಕಾರಣಂ ವಿಶ್ವರೂಪಮ್ ।
ತ್ವಮೇಕಂ ಜಗತ್ಕರ್ತೃಪಾತೃಪ್ರಹರ್ತೃ
ತ್ವಮೇಕಂ ಪರಂ ನಿಷ್ಕಲಂ ನಿರ್ವಿಕಲ್ಪಮ್ ॥

ನೀನೊಬ್ಬನೇ ಭಕ್ತರಿಗೆ ಆಶ್ರಯಸ್ಥಾನ, ನೀನೇ ಅಪೇಕ್ಷಣೀಯವಾದ ವಸ್ತು; ನೀನೇ ಜಗತ್ತಿಗೆ ಕಾರಣ ಮತ್ತು ವಿಶ್ವರೂಪವು; ಜಗತ್ತಿನ ಸೃಷ್ಟಿಗೆ ನೀನೇ ಕಾರಣ; ಸ್ಥಿತಿ, ಲಯಗಳಿಗೂ ಕೂಡ. ನೀನೇ ಎಲ್ಲಕ್ಕಿಂತ ಮಿಗಿಲಾದವನು, ವಿಂಗಡಿಸಲ್ಪಡಲಾಗದವನು, ಜ್ಞಾತೃ-ಜ್ಞೇಯಗಳೆಂಬ ಭೇದರಹಿತನು.

ಭಯಾನಾಂ ಭಯಂ ಭೀಷಣಂ ಭೀಷಣಾನಾಂ
ಗತಿಃ ಪ್ರಾಣಿನಾಂ ಪಾವನಂ ಪಾವನಾನಾಮ್ ।
ಮಹೋಚ್ಚೈಃ ಪದಾನಾಂ ನಿಯಂತೃ ತ್ವಮೇಕಂ
ಪರೇಷಾಂ ಪರಂ ರಕ್ಷಣಂ ರಕ್ಷಣಾನಾಮ್ ॥

ಭಯಕ್ಕೆ ಭಯಂಕರನು ನೀನು; ಭೀಷಣಕ್ಕೆ ಭೀಷಣಕಾರಿಯು ನೀನು. ಪ್ರಾಣಿಗಳ ಗತಿ ನೀನೇ, ಪವಿತ್ರ ಮಾಡುವ ವಸ್ತುಗಳನ್ನು ಪವಿತ್ರ ಮಾಡುವುದು ನೀನೇ, ಉಚ್ಚ ಸ್ಥಾನದಲ್ಲಿರುವುದನ್ನು ಆಳುವವನು ನೀನೇ; ಉತ್ತಮೋತ್ತಮವು ನೀನೇ, ರಕ್ಷಕರನ್ನು ರಕ್ಷಿಸುವುದು ನೀನೇ.

---

## ಸೂಕ್ತಿಪ್ರಭ

- ನಾವು ಎಷ್ಟು ಮಾಡುತ್ತೇವೆ ಎಂಬುದು ಮುಖ್ಯವಲ್ಲ. ಮಾಡುವುದರಲ್ಲಿ ಎಷ್ಟು ಪ್ರೀತಿಯನ್ನು ಹೊಂದಿದ್ದೇವೆ ಎಂಬುದು ಮುಖ್ಯ. ನಾವು ಎಷ್ಟು ನೀಡುತ್ತೇವೆ ಎಂಬುದು ಮುಖ್ಯವಲ್ಲ, ನೀಡುವಾಗ ನಾವೆಷ್ಟು ಪ್ರೀತಿಯಿಂದ ನೀಡುತ್ತೇವೆ ಎಂಬುದು ಮುಖ್ಯ. —ಮದರ್ ಥೆರೇಸಾ
- ಕರೆಯುವವರೆಲ್ಲರಿಗೂ ಅತ್ಯಂತ ಸಮೀಪದಲ್ಲೇ ದೇವರಿರುವನು—ಹೌದು, ಯಾರು ನಿಷ್ಠೆಯಿಂದ ಕರೆಯುವರೋ, ಅವರೆಲ್ಲರ ಸಮೀಪದಲ್ಲಿ. —ಸಾಮ್ ಅಥವಾ ಬೈಬಲ್ ಸ್ತೋತ್ರ
- ತನ್ನ ಮಗುವಿನ ಬಗ್ಗೆ ತಾಯಿಗೆ ಇರುವ ಪ್ರೀತಿಯಂತೆ ಈ ಜಗತ್ತಿನಲ್ಲಿ ಮತ್ತಾವುದೂ ಇಲ್ಲ. ಅದಕ್ಕೆ ಕಾನೂನು ತಿಳಿದಿಲ್ಲ, ಕರುಣೆಯಿಲ್ಲ; ತನ್ನ ಹಾದಿಯಲ್ಲಿ ಅಡ್ಡನಿಲ್ಲುವ ಎಲ್ಲವನ್ನೂ ದಿಟ್ಟವಾಗಿ ಯಾವುದೇ ಅಳುಕಿಲ್ಲದೆ ನುಚ್ಚುನೂರು ಮಾಡಬಲ್ಲದು. —ಅಗಾಥಾ ಕ್ರಿಸ್ಟಿ
- ಭಯವು ಎಂದಿಗೂ ಉತ್ತಮ ಸಂಗಾತಿಯಲ್ಲ. ಆಧ್ಯಾತ್ಮಿಕ ಜೀವನದಲ್ಲಿ ಮನುಷ್ಯ ಮೊದಲು ಸಾಧಿಸಬೇಕಾದ್ದು ಭಯವನ್ನು ಗೆಲ್ಲುವುದೇ. —ನಿಕೋಲಸ್ ಬರ್ಡ್ಯೇವ್
- ನಾವು ಸಮಸ್ಯೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಪರಿಹಾರವು ಅದರಿಂದಲೇ ಹೊರಹೊಮ್ಮುವುದು. ಏಕೆಂದರೆ ಪರಿಹಾರವು ಸಮಸ್ಯೆಗಿಂತ ಭಿನ್ನವಲ್ಲ. —ಜೆ. ಕೃಷ್ಣಮೂರ್ತಿ
- ಒಬ್ಬ ಒಳ್ಳೆಯ ಮನುಷ್ಯನ ಜೀವನದ ಅತ್ಯುತ್ತಮ ಅಂಶಗಳೆಂದರೆ ಜನರ ಮನ್ನಣೆ ದೊರೆಯದ, ತನಗೂ ನೆನಪಿಲ್ಲದ ಆತನ ಪ್ರೀತಿಯ, ಕರುಣೆಯ ಅಭಿವ್ಯಕ್ತಿಗಳಾದ ಸಣ್ಣ ಸಣ್ಣ ಕ್ರಿಯೆಗಳು. —ವಿಲಿಯಂ ವರ್ಡ್ಸ್‌ವರ್ತ್
- ಮಗು ಆಡದೆ ಇರುವ ಮಾತನ್ನೂ ಅರ್ಥ ಮಾಡಿಕೊಳ್ಳುವುದು ಮಾತೃಹೃದಯದ ಸಾಮರ್ಥ್ಯ. —ಅನಾಮಿಕ